# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳಲ್ಲಿ ಮತ್ತು ಅವುಗಳ ವ್ಯಾಪ್ತಿಯಲ್ಲಿನ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರ ವೈದ್ಯಕೀಯ ವೆಚ್ಚ ಮರುಪಾವತಿಗೆ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1) ಪತ್ರ ಸಂಖ್ಯೆ: ಆಇ 08 ಜಿಪಅ 2013 ದಿನಾಂಕ:7.12.2013
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ, ಕೋಲಾರ, ದಾವಣಗೆರೆ ಮತ್ತು ಹಾಸನರವರುಗಳ ಪತ್ರ

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ರಾಜ್ಯದ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳಲ್ಲಿ ಅವುಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೈದ್ಯಕೀಯ ವೆಚ್ಚ ಮರುಪಾವತಿಗೆ ಬಾಕಿ ಇರುವ ಬಿಲ್ಲುಗಳನ್ನು ತೀರ್ಣಗೊಳಿಸಲು ಅಗತ್ಯವಿರುವ ಅನುದಾನದ ವಿವರಗಳನ್ನು ಸಲ್ಲಿಸುವಂತೆ ಕೋರಿರುವ ಮೇರೆಗೆ ಮೇಲೆ(2)ರಲ್ಲಿ ಓದಲಾದ ಜಿಲ್ಲಾ ಪಂಚಾಯತ್‌ಗಳಲ್ಲಿ ಮತ್ತು ಅವುಗಳ ವ್ಯಾಪ್ತಿಯ ತಾಲ್ಲೂಕು ಪಂಚಾಯತ್‌ಗಳಲ್ಲಿನ ಬೇಡಿಕೆಗಳನ್ನು ಸಲ್ಲಿಸಿದ್ದು ಅದರನ್ವಯ ಜಿಲ್ಲಾ ಪಂಚಾಯತ್‌ಗೆ ರೂ.357.67ಲಕ್ಷ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ರೂ.402.19ಲಕ್ಷ ಒಟ್ಟು ರೂ.759.86ಲಕ್ಷಗಳ ಅನುದಾನದ ಅವಶ್ಯಕತೆ ಇರುವುದಾಗಿ ಕೋರಿರುತ್ತಾರೆ. ಕೋರಿಕೆಯನ್ನು ಪರಿಗಣಿಸಿ ಲೆಕ್ಕ ಶೀರ್ಷಿಕೆ 2515–00–196–1–05–300 ಮತ್ತು 2515–00–197–1–10–300(ಯೋಜನೇತರ) ಅಡಿ ಬಿಡುಗಡೆಗೆ ಲಭ್ಯವಿರುವ ಅನುದಾನದಿಂದ ಬಿಡುಗಡೆಗೊಳಿಸುವ ಸಂಬಂಧ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 08 ಜಿಪಅ 2013 ದಿನಾಂಕ: 10ನೇ ಜನವರಿ 2014

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕೆಳಕಂಡಂತೆ ಲಿಂಕ್ ಡಾಕ್ಯುಮೆಂಟ್ ಲೆಕ್ಕ ಶಿರ್ಷಿಕೆ 2515–00–101–0–26–021 ಮತ್ತು 2515–00–102–0–63–021(ಯೋಜನೇತರ) ಕಾರ್ಯಕ್ರಮದಡಿ ಜಿಲ್ಲಾ/ತಾಲ್ಲೂಕುಗಳಲ್ಲಿ ಮತ್ತು ಅವುಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ರೂ.739.86ಲಕ್ಷ (ರೂಪಾಯಿ ಏಳು ನೂರ ಮೂವತ್ತೊಂಬತ್ತು ಲಕ್ಷದ ಎಂಬತ್ತಾರು ಸಾವಿರಗಳು ಮಾತ್ರ)ಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ 2515–00–196–1–05–300 ಮತ್ತು 2515–00–197–1–10–300 (ಯೋಜನೇತರ) ಅಡಿ ಬಿಡುಗಡೆಗೊಳಿಸಲಾಗಿದೆ. ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ನಿಯಮಾನುಸಾರ ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್ಲುಗಳನ್ನು ತೀರ್ಣಗೊಳಿಸಲು ಆದೇಶಿಸಿದೆ.

ಪು.ತಿ.ನೋ. . . . .

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಜಿಲ್ಲಾ/ತಾಲ್ಲೂಕು ಪಂಚಾತ್ | 2515-00-196-05-300 (ಯೋಜನೇತರ) | 2515-00-196-1-10-300 (ಯೋಜನೇತರ) | ಒಟ್ಟು |
|---|---|---|---|---|
| 1 | ತಾ.ಪಂ.ಶಿವಮೊಗ್ಗ<br>ತಾ.ಪಂ.ಭದ್ರಾವತಿ<br>ತಾ.ಪಂ.ಶಿಕಾರಿಪುರ<br>ತಾ.ಪಂ.ತೀರ್ಥಹಳ್ಳಿ<br>ತಾ.ಪಂ.ಸೊರಬ<br>ತಾ.ಪಂ. ಹೊಸನಗರ | | 31.00<br>20.51<br>14.00<br>5.17<br>10.30<br>7.21 | **88.19** |
| 2 | ತಾ.ಪಂ.ಕೋಲಾರ<br>ತಾ.ಪಂ.ಶ್ರೀನಿವಾಸಪುರ<br>ತಾ.ಪಂ.ಮುಳಬಾಗಿಲು<br>ತಾ.ಪಂ.ಬಂಗಾರಪೇಟೆ<br>ತಾ.ಪಂ. ಮಾಲೂರು | | 42.00<br>25.00<br>30.00<br>57.00<br>30.00 | **184.00** |
| 3 | ಜಿ.ಪಂ. ಹಾಸನ | 100.00 | | **100.00** |
| | ತಾ.ಪಂ.ಹಾಸನ<br>ತಾ.ಪಂ.ಆಲೂರು<br>ತಾ.ಪಂ.ಅರಕಲಗೂಡು<br>ತಾ.ಪಂ.ಅರಸೀಕೆರೆ<br>ತಾ.ಪಂ.ಬೇಲೂರು<br>ತಾ.ಪಂ.ಚನ್ನರಾಯಪಟ್ಟಣ<br>ತಾ.ಪಂ.ಹೊಳೆನರಸೀಪುರ<br>ತಾ.ಪಂ.ಸಕಲೇಶಪುರ | | 20.00<br>10.00<br>10.00<br>20.00<br>10.00<br>20.00<br>10.00<br>10.00 | **110.00** |
| 4 | ಜಿ.ಪಂ.ದಾವಣಗೆರೆ | 257.67 | | **257.67** |
| | **ಒಟ್ಟು** | **357.67** | **382.19** | **739.86** |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಮುರಳೀಧರ
10-1-14

**(ಕೆ. ಮುರಳೀಧರ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ವೆಚ್ಚ 5)

1) ಮಹಾಲೇಖಪಾಲರು (ಎ&ಇ), ಲೆಕ್ಕ ಪರಿಶೋಧನೆ 1&2, ಕರ್ನಾಟಕ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
3) ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು
4) ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5) ಸಂಬಂಧಪಟ್ಟ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು
6) ಸಂಬಂಧಪಟ್ಟ ಜಿಲ್ಲಾ/ಉಪ ಖಜಾನೆ ಅಧಿಕಾರಿಗಳು
7) ರಕ್ಷ ಕಡತಕ್ಕೆ
8) ಹೆಚ್ಚುವರಿ ಪ್ರತಿಗಳು